# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ


ಮುಕ್ತಗಂಗೋತ್ರಿ, ಮೈಸೂರು – 570 006.

ವಿದ್ಯಾರ್ಥಿವೇತನ ಘಟಕ

E-Mail : coordinatorscsteellksou@gmail.com Ph : 0821-2500073 Ext :312


ಸಂಖ್ಯೆ: ಕರಾಮುವಿ/ವಿ.ವೇ.ಘಟಕ/02/2022-2023 ದಿನಾಂಕ: 20-10-2022

## ಸುತ್ತೋಲೆ

**ವಿಷಯ** : ವಿಶ್ವವಿದ್ಯಾನಿಲಯದ ಅರ್ಹ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳಿಗೆ ಷರತ್ತಿಗೆ ಒಳಪಟ್ಟು ಶುಲ್ಕ ವಿನಾಯಿತಿಯಡಿ ಪ್ರವೇಶಾತಿ ನೀಡುವುದರ ಬಗೆಗೆ.

**ಉಲ್ಲೇಖ:** 1. ಕರ್ನಾಟಕ ರಾಜ್ಯ ಸಂಶೋಧಕ ಸಂಘ, ಬೆಂಗಳೂರು ಇವರ ಮನವಿ ಪತ್ರ ದಿನಾಂಕ: 11-10-2022

2. ವಿ.ವಿಯ ಸುತ್ತೋಲೆ ಸಂಖ್ಯೆ: ಕರಾಮುವಿ/ವಿ.ವೇಘಟಕ/02/2022-23 ದಿನಾಂಕ:1/08/2022.
3. ಜಂಟಿ ನಿರ್ದೇಶಕರು,ಸ.ಕ.ಇಲಾಖೆ ಮೈಸೂರು ಇವರ ಪತ್ರಸಂಖ್ಯೆ:ಸಂ:ಜಂನಿ/ಸಕಇ/ಮೈ/ಶಿಕ್ಷಣ /ಸಿಆರ್01-2021-22 ದಿನಾಂಕ:04-08-2022
4. ಸಹಾಯಕ ನಿರ್ದೇಶಕರು ಸ.ಕ.ಇಲಾಖೆ ಇವರ ಪತ್ರ ಸಂಖ್ಯೆ: ಸಂ/ ಸನಿಗ್ರೇಡ್-1/ಮೈ/ಶಿಕ್ಷಣ/ ಸಿಆರ್ /2022-23 ದಿನಾಂಕ:09-09-2022
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 19-10-2022

*********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಪತ್ರಗಳಿಗೆ ಸಂಬಂಧಿಸಿದಂತೆ, ಶುಲ್ಕ ವಿನಾಯಿತಿಯಡಿ ಪ್ರವೇಶಾತಿ ಪಡೆಯುವ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನವು ವಿದ್ಯಾರ್ಥಿಗಳ ವೈಯಕ್ತಿಕ ಖಾತೆಗೆ ಜಮೆಯಾಗುತ್ತಿರುವ ಹಿನ್ನಲೆಯಲ್ಲಿ 2022-23ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ವಿಭಾಗದ ಪ್ರವೇಶಾತಿ ಅಧಿಸೂಚನೆಯನುಸಾರವಾಗಿ ಘಟಕದಿಂದ ಉಲ್ಲೇಖಿತ-02ರ ಸುತ್ತೋಲೆಯನುಸಾರ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳು ಶುಲ್ಕ ಪಾವತಿಸಿ ಪ್ರವೇಶಾತಿ ಪಡೆದು ತದನಂತರ ಶುಲ್ಕ ಮರುಭರಿಕೆಗಾಗಿ SSPಯಲ್ಲಿ ಅರ್ಜಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ ಉಲ್ಲೇಖ-01ರ ಮನವಿಗೆ ಸಂಬಂಧಿಸಿದಂತೆ ಉಲ್ಲೇಖ-03 ಮತ್ತು 04ರ ಸಮಾಜ ಕಲ್ಯಾಣ ಇಲಾಖೆಯ ಪತ್ರದನುಸಾರ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಶುಲ್ಕ ವಿನಾಯಿತಿಯಡಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ತಮ್ಮ ಸೆಮಿಸ್ಟರ್/ವಾರ್ಷಿಕ ಪರೀಕ್ಷೆಗೂ ಮುನ್ನ ಬಾಕಿ ಬೋಧನಾ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳನ್ನು ಪಾವತಿಸುತ್ತೇನೆ ಎಂಬ ಷರತ್ತಿನೊಂದಿಗೆ ಶುಲ್ಕ ವಿನಾಯಿತಿಯಡಿ ಪ್ರವೇಶಾತಿಯನ್ನು ನೀಡಿ ತದನಂತರ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ SSP ಯಲ್ಲಿ ಅರ್ಜಿ ಸಲ್ಲಿಸಿ ಅಂತಿಮ ಸ್ವೀಕೃತಿಯ ಜೊತೆಗೆ ಸೂಕ್ತ ದಾಖಲಾತಿಗಳನ್ನು ಪಡೆದುಕೊಂಡು ಕ್ರಮವಹಿಸುವುದು. ಎಂದು ಆದೇಶಿಸಿರುವುದರಿಂದ ಸದರಿ ಉಲ್ಲೇಖಿತ-02ರ ಸುತ್ತೋಲೆಯನ್ನು ಹಿಂಪಡೆಯಲಾಗಿದೆ.

ಕುಲಸಚಿವ

20/10/22

ಗೆ,

ನೋಡಲ್ ಅಧಿಕಾರಿ(ವೆಬ್‌ಸೈಟ್), ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು. ರವರು ಸದರಿ ಸುತ್ತೋಲೆಯ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಿ ಕ್ರಮವಹಿಸಲು ಸೂಚಿಸಿದೆ.

<u>ಪ್ರತಿಗಳು:</u>

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್ (ಅಧ್ಯಯನ ಕೇಂದ್ರ) ಕರಾಮುವಿ, ಮೈಸೂರು. ಎಲ್ಲಾ ಪ್ರಾದೇಶಿಕ ಕೇಂದ್ರಗಳಿಗೆ ಸೂಕ್ತ ನಿರ್ದೇಶನ ನೀಡುವುದು.